**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹುಣಸೂರು**

**ಸಿಸಿ ನಂ.228/2023**

**ಫಿರ್ಯಾದುದಾರರುಃ** ಪಾಂಡುರಂಗರಾವ್ ಹೆಚ್, ಬಿನ್ ಲೇಟ್ ಹನುಮಂತರಾವ್,
50 ವರ್ಷ, ವಾಸಃ ನಂ.460, ದೊಡ್ಡಮಸೀದಿ ಬೀದಿ,
ಹುಣಸೂರು ಪಟ್ಟಣ.

**– ವಿರುದ್ಧ –**

**ಆರೋಪಿಃ** ಲಕ್ಷ್ಮಣ, ಬಿನ್ ಲೇಟ್ ವೆಂಕಟೇಗೌಡ,
58 ವರ್ಷ, ವಾಸಃ ಕಟ್ಟೆಮಳಲವಾಡಿ ಗ್ರಾಮ ಮತ್ತು ಅಂಚೆ,
ಕೆ.ಆರ್.ನಗರ ರಸ್ತೆ, ಐ.ಒ.ಬಿ. ಬ್ಯಾಂಕ್ ಹತ್ತಿರ,
ಹುಣಸೂರು ತಾಲ್ಲೂಕು.

**ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313 ರ ಅಡಿಯಲ್ಲಿ ಆರೋಪಿಯ ಹೇಳಿಕೆ**

| | |
|---|---|
| ಪ್ರಶ್ನೆ 1: | ಫಿರ್ಯಾದುದಾರರಾದ ಪಾಂಡುರಂಗರಾವ್ ಹೆಚ್ ರವರು ನಿಮ್ಮ ವಿರುದ್ಧ ಕೊಟ್ಟಿರುವ ಹೇಳಿಕೆಗಳನ್ನು ಕೇಳಿದ್ದೀರಾ? |
| ಉತ್ತರ: | ತಿಳಿಯಿತು |
| ಪ್ರಶ್ನೆ 2: | ಪಿ.ಡಬ್ಲ್ಯೂ.1 ಪಾಂಡುರಂಗರಾವ್ ಹೆಚ್ ರವರು ತಮ್ಮ ಸಾಕ್ಷ್ಯದಲ್ಲಿ, ನೀವು ಮತ್ತು ಅವರು ಹಲವಾರು ವರ್ಷಗಳಿಂದ ಪರಿಚಯಸ್ಥರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಹೌದು |
| ಪ್ರಶ್ನೆ 3: | ಪಿ.ಡಬ್ಲ್ಯೂ.1 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಸದರಿ ಪರಿಚಯದ ಆಧಾರದ ಮೇಲೆ ನೀವು ನಿಮ್ಮ ಕಾನೂನುಬದ್ಧ ಅವಶ್ಯಕತೆಗಾಗಿ ಅಂದರೆ ಹಳೆಯ ಕೈಸಾಲಗಳನ್ನು ತೀರಿಸಲು, ವ್ಯಾಪಾರದ ಅವಶ್ಯಕತೆಗಾಗಿ ಹಾಗು ಗೃಹಕೃತದ ಖರ್ಚಿಗಾಗಿ 2022 ಅಕ್ಟೋಬರ್ ತಿಂಗಳಿನ ಮೊದಲನೇ ವಾರದಲ್ಲಿ ಅವರಿಂದ ರೂ.4,00,000/- |

| | |
|---|---|
| | ಗಳನ್ನು ಮೂರು ತಿಂಗಳ ಒಳಗೆ ಮರುಪಾವತಿಸುವುದಾಗಿ ಹೇಳಿ ಸಾಲವಾಗಿ ಪಡೆದುಕೊಂಡಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 4: | ಇದೇ ಸಾಕ್ಷಿಯು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಸದರಿ ಸಾಲದ ಮರುಪಾವತಿಗಾಗಿ ನೀವು 02.03.2023 ರ ದಿನಾಂಕ ನಮೂದಿಸಿದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಎಸ್.ಜೆ.ರಸ್ತೆ ಹುಣಸೂರು ಶಾಖೆಯ ಚೆಕ್ ಸಂಖ್ಯೆ: 394951 ಅನ್ನು ರೂ.4,00,000/-ಗಳಿಗೆ ನೀಡಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 5: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದರಿ ಚೆಕ್ ಅನ್ನು ಅವರು ತಮ್ಮ ಬ್ಯಾಂಕ್ ಇರುವ ಇಂಡಿಯನ್ ಓವರ್ ಸೀಸ್ ಬ್ಯಾಂಕ್, ಹುಣಸೂರು ಶಾಖೆಯ ಮೂಲಕ ನಗದೀಕರಣಕ್ಕಾಗಿ ಹಾಜರುಪಡಿಸಿದಾಗ "ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ" ಎಂಬ ಕಾರಣಕ್ಕಾಗಿ ಸದರಿ ಚೆಕ್ ಅಮಾನ್ಯಗೊಂಡು ದಿನಾಂಕಃ 03.03.2023 ರಂದು ಬ್ಯಾಂಕಿನ ಹಿಂಬರಹದೊಂದಿಗೆ ವಾಪಾಸಾಗಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 6: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಈ ಬಗ್ಗೆ ದಿನಾಂಕ 21.03.2023 ರಂದು ಅವರು ನಿಮಗೆ ತಮ್ಮ ವಕೀಲರ ಮೂಲಕ ನೊಂದಾಯಿತ ಅಂಚೆಯ ಮೂಲಕ ನೋಟೀಸನ್ನು ನೀಡಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |

| | |
|---|---|
| ಉತ್ತರ: | ಹೌದು |
| ಪ್ರಶ್ನೆ 7: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದರಿ ನೋಟೀಸ್ ನಿಮಗೆ 27.03.2023 ರಂದು ಜಾರಿಯಾಗಿದ್ದರೂ ಸಹ ನೀವು ಉದ್ದೇಶಪೂರ್ವಕವಾಗಿ ಫಿರ್ಯಾದುದಾರರಿಗೆ ನೀಡಬೇಕಾದ ಚೆಕ್ಕಿನ ಹಣವನ್ನು ಮರುಪಾವತಿಸಿಲ್ಲ ಹಾಗು ನೋಟೀಸಿಗೆ ಉತ್ತರವನ್ನು ನೀಡಿರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಹೌದು |
| ಪ್ರಶ್ನೆ 8: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆದರೂ ಸಹ ನೀವು ಈವರೆಗೂ ಸಾಲದ ಹಣವನ್ನು ಮರುಪಾವತಿಸದೆ ಇರುವುದರಿಂದ ನೆಗೋಶಿಯೇಬಲ್ ಇನ್ಸ್ಟುಮೆಂಟ್ಸ್ ಕಾಯಿದೆಯ ಕಲಂ 138ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 9: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನೀವು ಅವರಿಗೆ ನೀಡಿದ ಚೆಕ್, ಬ್ಯಾಂಕಿನವರು ನೀಡಿದ ಹಿಂಬರಹ, ವಕೀಲರ ಮೂಲಕ ನೀಡಿದ ನೋಟೀಸಿನ ಕಚೇರಿ ಪ್ರತಿ, ಅಂಚೆ ರಶೀದಿ ಮತ್ತು ಅಂಚೆ ಸ್ವೀಕೃತಿ ಪತ್ರವನ್ನು ನಿಪಿ-1 ರಿಂದ ನಿಪಿ-5 ಎಂದು ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 10: | ನಿಮಗೆ ಈ ಕೇಸಿನ ಬಗ್ಗೆ ಮತ್ತೆ ಏನಾದರೂ ಹೇಳುವುದು ಇದೆಯೇ? |
| ಉತ್ತರ: | ಇದೆ. ನೋಟೀಸು ಸ್ವೀಕರಿಸಿದ ನಂತರ ನನ್ನ ಸ್ನೇಹಿತರನ್ನು ಕರೆದುಕೊಂಡು ಹೋಗಿ ವಿಚಾರಿಸಿದಾಗ, ಕೇಸು ಹಾಕುವುದಿಲ್ಲ ಎಂದು |

| | |
|---|---|
| | ಹೇಳಿದರು. |
| ಪ್ರಶ್ನೆ 11: | ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯೇ? |
| ಉತ್ತರ: | ಇದೆ |

ಈ ಮೇಲ್ಕಂಡ ಹೇಳಿಕೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಮತ್ತು ಸರಿಯಾಗಿದೆಯೆಂದು ದೃಢೀಕರಿಸಿರುತ್ತೇನೆ.

ದಿನಾಂಕಃ 25.10.2025

(ಅನಿತ)
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ., ಹುಣಸೂರು.**

ಆರೋಪಿಯ ಸಹಿಃ